ಜನ್ಮತಾಳಿದವು. ಅವುಗಳ ಮೇಲೆ ಟೀಕೆಗಳು, ವಾರ್ತಿಕಗಳು – ಹೀಗೆ ಬಹುವಿಧವಾದ ಸಾಹಿತ್ಯ ವಿಸ್ತೃತವಾಗಿ ಬೆಳೆಯಿತು. ಇದರಿಂದ ಸೂತ್ರಗಳ ಸರಿಯಾದ ಅರ್ಥವನ್ನು ಗ್ರಹಿಸಲು ಸಾಧ್ಯವಾಯಿತು. ಪಾತಂಜಲಯೋಗಸೂತ್ರಗಳ ಮೇಲಿನ ವ್ಯಾಸಭಾಷ್ಯ, ಶಾಂಡಿಲ್ಯ ಭಕ್ತಿಸೂತ್ರಗಳ ಮೇಲಿನ ಸ್ವಪ್ನೇಶ್ವರಭಾಷ್ಯ, ಪಾಣಿನಿಯ ಅಷ್ಟಾಧ್ಯಾಯಿಯ ಮೇಲಿನ ಪಾತಂಜಲ ಮಹಾಭಾಷ್ಯ ಮೊದಲಾದವುಗಳನ್ನು ಇಲ್ಲಿ ಉದಹರಿಸಬಹುದು.

ಭಾರತೀಯ ಆಧ್ಯಾತ್ಮಿಕ ಶಾಸ್ತ್ರಪರಂಪರೆಯಲ್ಲಿ ಬ್ರಹ್ಮಸೂತ್ರಗಳಿಗೆ ಮಹತ್ವದ ಸ್ಥಾನವಿದೆ. ಜೀವಿಯನ್ನು ಮೋಕ್ಷದ ಕಡೆಗೆ ಕೊಂಡೊಯ್ಯುವ ಮೂರು ಮಹಾಮಾರ್ಗಗಳಲ್ಲಿ (ಪ್ರಸ್ಥಾನ) ಬ್ರಹ್ಮಸೂತ್ರಗಳೂ ಸೇರಿವೆ. ಇವುಗಳನ್ನು 'ಸೂತ್ರಪ್ರಸ್ಥಾನ'ವೆಂದು ಕರೆಯಲಾಗಿದ್ದು ಮೂರನೆಯ ಪ್ರಸ್ಥಾನವೆನಿಸಿದೆ. ಬ್ರಹ್ಮಸೂತ್ರಗಳನ್ನು ರಚಿಸಿದವರು ಭಗವಾನ್ ವ್ಯಾಸಮಹರ್ಷಿಗಳು. ಇವರ ಇನ್ನೊಂದು ಹೆಸರು ಬಾದರಾಯಣರು. ಇಲ್ಲಿನ ಸೂತ್ರಗಳ ಒಟ್ಟು ಸಂಖ್ಯೆ ೫೫೫. ಅವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ:

| | ಅಧ್ಯಾಯ | ಅಧ್ಯಾಯ | ಅಧ್ಯಾಯ | ಅಧ್ಯಾಯ |
|---|---|---|---|---|
| | ೧ | ೨ | ೩ | ೪ |
| ಪಾದ ೧ | ೩೧ | ೩೭ | ೨೭ | ೧೯ |
| ಪಾದ ೨ | ೩೨ | ೪೫ | ೪೧ | ೨೧ |
| ಪಾದ ೩ | ೪೩ | ೫೩ | ೬೬ | ೧೬ |
| ಪಾದ ೪ | ೨೮ | ೨೨ | ೫೨ | ೨೨ |
| ಒಟ್ಟು | ೧೩೪ | ೧೫೭ | ೧೮೬ | ೭೮ |

ಇಲ್ಲಿ ವಿವರಿಸಲಾದ ಮುಖ್ಯ ವಿಷಯಗಳನ್ನು 'ಅಧಿಕರಣ'ವೆಂದು ಕರೆಯಲಾಗಿದ್ದು ೧೯೨ ಅಧಿಕರಣಗಳು ಇಲ್ಲಿವೆ.

ಉಪನಿಷತ್ತುಗಳು ಹಾಗೂ ಭಗವದ್ಗೀತೆಯಲ್ಲಿ ಹೇಳಲಾದ ಗಹನವಾದ ವೇದಾಂತವಿಚಾರಗಳನ್ನು ವೇದವ್ಯಾಸರು ಈ ಬ್ರಹ್ಮಸೂತ್ರಗಳಲ್ಲಿ ಯುಕ್ತಿಪ್ರಮಾಣಗಳಿಂದ ವಿಶದಪಡಿಸಿದ್ದಾರೆ. ಉಪನಿಷತ್ತು ಮತ್ತು ಭಗವದ್ಗೀತೆಗಳ ಮೇಲೆ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಹಾಗೂ ಶಕ್ತಿವಿಶಿಷ್ಟಾದ್ವೈತಪರವಾದ ಸಂಸ್ಕೃತದ ಭಾಷ್ಯಗಳು ರಚನೆಗೊಂಡಂತೆ, ಬ್ರಹ್ಮಸೂತ್ರಗಳ ಮೇಲೆಯೂ ಈ ನಾಲ್ಕೂ ವೇದಾಂತ ವಿಭಾಗಗಳ ಪರವಾದ ಸಂಸ್ಕೃತ ಭಾಷ್ಯಗಳು ರಚನೆಗೊಂಡಿದೆ. ಇವುಗಳಲ್ಲಿ ಶಂಕರಭಗವತ್ಪಾದರು ರಚಿಸಿದ ಬ್ರಹ್ಮಸೂತ್ರಭಾಷ್ಯವು ಸರ್ವಪ್ರಥಮವೂ ಅತ್ಯುತ್ಕೃಷ್ಟವೂ ಎನಿಸಿದೆ.

ಈ ಭಾಷ್ಯದಲ್ಲಿ ಸೂತ್ರಗಳ ವಿಸ್ತೃತ ವಿವರಣೆ, ಪೂರ್ವಪಕ್ಷ ನಿರೂಪಣೆ, ನಿರಾಕರಣೆ, ಸ್ವಸಿದ್ಧಾಂತಸ್ಥಾಪನೆ, ಇದಕ್ಕಾಗಿ ವಿವಿಧ ಶಾಸ್ತ್ರವಾಕ್ಯಗಳನ್ನು ಪ್ರಮಾಣವನ್ನಾಗಿ ಬಳಸುವುದು – ಇವೆಲ್ಲ ಕಂಡುಬರುತ್ತವೆ. ಈ ಭಾಷ್ಯದ ಪ್ರಸನ್ನ ಗಂಭೀರವಾದ ಭಾಷಾಶೈಲಿಯು ಸಹ ಅತ್ಯಂತ ಹೃದಯಂಗಮವಾಗಿದೆ.

ಕೆಲವರಿಗೆ ಉಪನಿಷತ್ತುಗಳು ಹಾಗೂ ದರ್ಶನಗಳ ಸಾಮಾನ್ಯ ತಿಳಿವಳಿಕೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಅವರು ಬ್ರಹ್ಮಸೂತ್ರ ಭಾಷ್ಯವನ್ನು ಅಧ್ಯಯನ ಮಾಡಲು ಬಯಸುತ್ತಾರೆ. ಆದರೆ ಅವರು ಭಗವತ್ಪಾದ ಶಂಕರರು ಬರೆದ ಗಭೀರವಾದ ಭಾಷ್ಯಾರ್ಥವನ್ನು ಗ್ರಹಿಸಲು ಶಕ್ತರಾಗಿರುವುದಿಲ್ಲ. ಅಂಥವರು ಸುಲಭವಾಗಿ ಶಂಕರರ ಬ್ರಹ್ಮಸೂತ್ರಭಾಷ್ಯದ ಸಾರವನ್ನು ತಿಳಿದುಕೊಳ್ಳಲು ಅನುಕೂಲವಾಗಲಿ ಎಂಬ ಸದಾಶಯದಿಂದ ಈ 'ವಿವೇಕಸೌರಭಮ್' ಕೃತಿಯನ್ನು ರಚಿಸಲಾಗಿದೆ. ಶಂಕರರ ಬ್ರಹ್ಮಸೂತ್ರ ಭಾಷ್ಯದಲ್ಲಿರುವ ಕಠಿಣ ಹಾಗೂ ತರ್ಕಭೂಯಿಷ್ಠವಾದ ಭಾಗಗಳನ್ನು ಹೊರತುಪಡಿಸಿ, ಬ್ರಹ್ಮಸೂತ್ರಗಳ ಮೂಲಾರ್ಥವನ್ನು ಗ್ರಹಿಸಲು ಅಗತ್ಯವೆನಿಸಿದ ಭಾಗಗಳನ್ನು ಆಧರಿಸಿ ಸಾರಭೂತವಾದ ಭಾಷ್ಯವನ್ನು ಇಲ್ಲಿ ನೀಡಲಾಗಿದೆ. ಇದೆಲ್ಲವನ್ನೂ ಗ್ರಂಥದಲ್ಲಿ ಪ್ರಸ್ತಾವನೆಯ ಮೂಲಕ ಸೂಚಿಸಲಾಗಿದೆ.

ಬ್ರಹ್ಮಸೂತ್ರಗಳ ಶಾಂಕರಭಾಷ್ಯವನ್ನು ಹಾಗೂ ಸ್ವಾಮಿ ಹರ್ಷಾನಂದರ 'ವಿವೇಕಸೌರಭ ಭಾಷ್ಯ'ವನ್ನು ನಾವು ಹೀಗೆ ಹೋಲಿಸಿ ನೋಡಬಹುದು:

| ಸೂತ್ರ | ಶಾಂಕರಭಾಷ್ಯ | ವಿವೇಕಸೌರಭ |
|---|---|---|
| ಅಥಾತೋ ಬ್ರಹ್ಮಜಿಜ್ಞಾಸಾ (೧-೧-೧) | ತತ್ರ ಅಥಶಬ್ದ ಆನಂತರ್ಯಾರ್ಥಃ ಪರಿಗೃಹ್ಯತೇ ನಾಧಿಕಾರಾರ್ಥಃ, ಬ್ರಹ್ಮಜಿಜ್ಞಾಸಾಯಾ ಅನಧಿಕಾರ್ಯತ್ವಾತ್ । ಮಂಗಲಸ್ಯ ಚ ವಾಕ್ಯಾರ್ಥೇ ಸಮನ್ವಯಾಭಾವಾತ್ । ಅರ್ಥಾಂತರ ಪ್ರಯುಕ್ತ ಏವ ಹ್ಯಥಶಬ್ದಃ ಶ್ರುತ್ಯಾ ಮಂಗಲ–ಪ್ರಯೋಜನೋ ಭವತಿ । ಪೂರ್ವಪ್ರಕೃತಾಪೇಕ್ಷಯಾಶ್ಚ ಫಲತ ಆನಂತರ್ಯಾ–ವ್ಯತಿರೇಕಾತ್ । ಸತಿ ಚಾನಂತರ್ಯಾರ್ಥತ್ವೇ ಯಥಾ ಧರ್ಮಜಿಜ್ಞಾಸಾ ಪೂರ್ವವೃತ್ತಂ ವೇದಾಧ್ಯಯನಂ ನಿಯಮೇನಾಪೇಕ್ಷತ, ಏವಂ ಬ್ರಹ್ಮಜಿಜ್ಞಾಸಾಪಿ ಯತ್ಪೂರ್ವವೃತ್ತಂ ನಿಯಮೇನಾಪೇಕ್ಷತೇ ತದ್ವಕ್ತವ್ಯಂ । | ಇದಮ್ ಆದಿಮಂ ಸೂತ್ರಮ್ । ಅತ್ರಾಥಶಬ್ದ ಆನಂತ–ರ್ಯಾರ್ಥಃ। ಸ ವಿವೇಕ ವೈರಾಗ್ಯಾದಿ ಸಾಧನ ಚತುಷ್ಟಯ ಸಂಪತ್ತೇಃ ಆನಂತರ್ಯಂ ಬ್ರಹ್ಮಜಿಜ್ಞಾ–ಸಾಯಾಂ ಸೂಚಯತಿ । |

ಪ್ರಸ್ತಾವನೆಯಿಂದ ಪ್ರಾರಂಭವಾಗುವ ಈ ಗ್ರಂಥವು ಸಂಕೇತಾಕ್ಷರ ಸೂಚಿ, ವಿಷಯಾನುಕ್ರಮ ಸೂಚಿಗಳನ್ನು ದಾಟಿ, ಅಧ್ಯಾಯ, ಪಾದ, ಅಧಿಕರಣಗಳನ್ನು ಸೂಚಿಸುತ್ತಾ, ಕ್ರಮಪ್ರಕಾರ ಸೂತ್ರಗಳನ್ನು ಪಟ್ಟಿಮಾಡುತ್ತ, ಸರಳ, ಸುಂದರ, ಸಂಕ್ಷಿಪ್ತ, ಹಾಗೂ ನೇರವಾದ ಭಾಷ್ಯವನ್ನು ನೀಡುತ್ತ ಮುಂದುವರೆಯುತ್ತದೆ. ಇಲ್ಲಿ ಪ್ರತಿಪಾದದ ಅಧಿಕರಣಗಳಿಗೆ ಕ್ರಮಸಂಖ್ಯೆಯನ್ನು ನೀಡಲಾಗಿದ್ದು, ಅಧಿಕರಣಗಳನ್ನು ವಿವರಿಸುವ ಸೂತ್ರಸಂಖ್ಯೆಗಳನ್ನು ಸಹ ಸೂಚಿಸಲಾಗಿದೆ. ಕೊನೆಯಲ್ಲಿ ಅಧ್ಯಾಯ ಹಾಗೂ